<u>ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ,ಬೈಂದೂರು</u>

**ಸಿಸಿ ನಂಬ್ರ: 222/2023**

**ಸಿಡಬ್ಲ್ಯೂ -3**
**ಪಿಡಬ್ಲ್ಯೂ -3**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಅಣ್ಣಪ್ಪ |
| **ತಂದೆಯ ಹೆಸರು** | : | ಗೋವಿಂದ |
| **ಪ್ರಾಯ** | : | 64 ವರ್ಷ |
| **ಉದ್ಯೋಗ** | : | ನಿವೃತ್ತ ರೆವೆನ್ಯೂ ಇನ್ಸಪೆಕ್ಟರ್ |
| **ವಾಸ** | : | ಬೈಂದೂರು |

ದಿನಾಂಕ: 13-04-2023 ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು.

<u>**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**</u>

2016 ನೇ ಇಸವಿಯಿಂದ 2018 ನೇ ಇಸವಿವರೆಗೆ ಬೈಂದೂರಿನ ಕಂದಾಯ ಇಲಾಖೆಯಲ್ಲಿ ಕಂದಾಯ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 2017 ನೇ ಇಸವಿಯಲ್ಲಿ ಅನಧಿಕೃತವಾಗಿ ಮರಳನ್ನು ಬಡಾಕೇರೆಯ ಹೊಳೆಯ ಸಮೀಪ ಶೇಖರಿಸಿಟ್ಟಿದ್ದಾರೆಂದು ಚಾಸಾ 1 ರವರಿಗೆ ಮಾಹಿತಿ ಬಂದಿರುತ್ತದೆ. ಅವರು ನನ್ನನ್ನು ಕರೆದುಕೊಂಡು ಸದರಿ ಸ್ಥಳಕ್ಕೆ ಹೋಗಿರುತ್ತಾರೆ. ಸದರಿ ಸ್ಥಳಕ್ಕೆ ಹೋದಾಗ 100 ಬುಟ್ಟಿ ಮರಳು ಸಿಕ್ಕಿರುತ್ತದೆ. ಸದರಿ ಮರಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ಮರಳನ್ನು ವಶಪಡಿಸಿಕೊಂಡು ಮಹಜರನ್ನು ತಯಾರಿಸಿರುತ್ತಾರೆ. ಸದರಿ ಘಟನಾ ಸ್ಥಳದಲ್ಲಿ ಬುಟ್ಟಿಗಳು ಇತ್ತು, ಆದರೆ ಎಷು ಬುಟ್ಟಿಗಳು ಇತ್ತು ಎಂದು ನೆನಪಿಲ್ಲ. ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

3. ನಿಪಿ -2 ರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು.

4. ಸದರಿ ಮರಳನ್ನು ಯಾರು ಶೇಖರಿಸಿದ್ದಾರೆ ಎಂದು ಸಾರ್ವಜನಿಕರಲ್ಲಿ ಕೇಳಿದಾಗ ವಾಸು

ಪೂಜಾರಿ ಎಂದು ಹೇಳಿರುತ್ತಾರೆ. ಪ್ರಕರಣದ ತನಿಖೆಯ ಸಮಯದಲ್ಲಿ ಆರೋಪಿಯನ್ನು ನಾನು ನೋಡಿರುವುದಿಲ್ಲ. ಘಟನಾ ಸ್ಥಳದಲ್ಲಿದ್ದ ಬುಟ್ಟಿಗಳನ್ನು ನೋಡಿದರೆ ಗುರುತಿಸುತ್ತೇನೆ.

5. ಸಾಕ್ಷಿಗೆ ಸ್ವತ್ತಿನ ಛಾಯಾ ಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದರಿ ಸ್ವತ್ತಿನ ಛಾಯಾ ಚಿತ್ರವನ್ನು ನಿಪಿ 3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ.ವಿ.ಜಿ. ರವರಿಂದ</u>**

ಶ್ರೀ ಜಿ.ವಿ.ಎಸ್. ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಬೈಂದೂರು**